# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಮುಳಬಾಗಿಲು

## ಅಪರಾಧಿಕ ಪ್ರಕರಣ ಸಂಖ್ಯೆ.**1330/2023**

| | | |
|---|---|---|
| ಫಿರ್ಯಾದುದಾರರು | : | ಕೃಷ್ಣಮೂರ್ತಿ, 40 ವರ್ಷ,<br>ಬಿನ್ಃ ತಿಪ್ಪಾರೆಡ್ಡಿ ಎನ್,<br>ವಾಸಃ ಕಗ್ಗಿನಹಳ್ಳಿ ಗ್ರಾಮ,<br>ಬಲ್ಲ ಅಂಚೆ,<br>ಮುಳಬಾಗಿಲು ತಾಲೂಕು. |

-ವಿರುದ್ಧ-

| | | |
|---|---|---|
| ಆರೋಪಿ | : | ಜಿ. ನಾರಾಯಣಸ್ವಾಮಿ., 50 ವರ್ಷ,<br>ಬಿನ್ಃ ಗಿರಿಗೌಡ,<br>ವಾಸಃ ಪಿಂಡಿನಗರ ಗ್ರಾಮ,<br>ಯಲ್ದೂರು ಅಂಚೆ ಮತ್ತು ಹೋಬಳಿ,<br>ಶ್ರೀನಿವಾಸಪುರ ತಾಲೂಕು,<br>ಕೋಲಾರ ಜಿಲ್ಲೆ. |

- - -

ದಂಡ ಪ್ರಕ್ರಿಯೆ ಸಂಹಿತೆ ಕಲಂ- **313** ರ ರೀತ್ಯಾ ಆರೋಪಿಯ ಹೇಳಿಕೆ

**ಪ್ರಶ್ನೆ.1:** ನೀವು ಸಾಕ್ಷಿ ವಿಚಾರಣೆ ಕೇಳಿದ್ದಿರಾ?

ಉತ್ತರಃ

**ಪ್ರಶ್ನೆ.2:** ಪ್ರಾಸಾ-**1** ಕೃಷ್ಣಮೂರ್ತಿ, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಅವರಿಂದ ಪಡೆದುಕೊಂಡ ಹಣವನ್ನು ಮರು-ಪಾವತಿ ಮಾಡುವ ಸಲುವಾಗಿ ರೂ.5,00,000/-ಗಳಿಗೆ ಮುಂದಿನ ದಿನಾಂಕ ನಮೂದಿಸಿದ ದಿಃ28.02.2023 ಶ್ರೀನಿವಾಸಪುರ ತಾಲೂಕಿನ ಯಲ್ದೂರು ಶಾಖೆಯ ಎಸ್.ಬಿ.ಐ ಬ್ಯಾಂಕಿನ ಚೆಕ್ ನಂ.692263 ನ್ನು ಅವರ ಹೆಸರಿಗೆ ನೀಡಿರುತ್ತೀರಿ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ.3:** ಪ್ರಾಸಾ-1 ರವರು ಪುನಃ ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ ಅನ್ನು ನಗದೀಕರಣಗೊಳಿಸಲು ಫಿರ್ಯಾದಿಯು ಮುಳಬಾಗಿಲು ಶಾಖೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಚೆಕ್ 'ಸಾಕಷ್ಟು ಹಣವಿಲ್ಲ' ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುತ್ತದೆ ಅಂತ ಹೇಳುತ್ತಾರೆ. ಈ

ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ.4:** ಪ್ರಾಸಾ-1 ರರು ಪುನಃ ತಮ್ಮ ಸಾಕ್ಷ್ಯದಲ್ಲಿ, ಚೆಕ್ ಅನಾಧರಣಗೊಂಡ ಬಗ್ಗೆ ಫಿರ್ಯಾದಿಯು ವಕೀಲರ ಮೂಲಕ ಆರೋಪಿಯಾದ ನಿಮಗೆ ದಿಃ07.03.2023 ರಂದು ನೋಟೀಸ್ ನೀಡಿದಾಗ್ಯೂ ಸಹ, ಆರೋಪಿಯಾದ ನೀವು ಚೆಕ್ ಬಾಬ್ತು ಹಣವನ್ನು ಅವರಿಗೆ ಕೊಟ್ಟಿರುವುದಿಲ್ಲ ಎಂದೂ, ಆ ಕಾರಣದಿಂದ ನಿಮ್ಮ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ.5:** ಪ್ರಾಸಾ-1 ರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಇದುವರೆವಿಗೂ ಸಹ ಚೆಕ್ ಬಾಬ್ತು ಹಣವನ್ನು ಮರು-ಪಾವತಿಸಿರುವುದಿಲ್ಲ ಹಾಗೂ ಆರೋಪಿಯಾದ ನೀವು ಅವರಿಗೆ ಮೋಸ ಮಾಡುವ ಉದ್ದೇಶದಿಂದಲೇ ಈ ರೀತಿಯ ಚೆಕ್ ಅನ್ನು ಅವರಿಗೆ ಕೊಟ್ಟಿರುತ್ತೀರಿ, ಆದುದರಿಂದ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ- **138** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ.6:** ಈ ಕೇಸಿನಲ್ಲಿ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯೇ?

ಉತ್ತರಃ

**ಪ್ರಶ್ನೆ.7:** ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ, ಆತ ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ 13 ನೇ ನವೆಂಬರ್, 2025.

(ಹರೀಶ್ ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಮುಳಬಾಗಿಲು.

Visit **ecourts.gov.in** for updates or download mobile app “**eCourts Services**” from Android or iOS